**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 85/ 2015**

ಪಿರ್ಯಾದುದಾರರು : ಕುದೂರು ಪೋಲಿಸ್?ಠಾಣೆ

**ವಿರುದ್ಧ**

**ಆರೋಪಿಗಳು** :

**ಚಾಸಾ :- 11 / ಪ್ರಾಸಾ :- 06**

| | |
|---|---|
| ಹೆಸರು | **ಸೈಯದ್ ಸಲ್ಮಾ** |
| ತಂದೆಯ / ಗಂಡನ ಹೆಸರು | **ಸೈಯದ್ ಇಕ್ಬಾಲ್** |
| ವಯಸ್ಸು | **36** |
| ಉದ್ಯೋಗ | **ಬ್ಯುಟಿಶಿಯನ್** |
| ವಿಳಾಸ | **ಬೆಂಗಳೂರು** |

**ದಿನಾಂಕ: 09 -03-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನಾನು ಆರೋಪಿಯನ್ನು ನೋಡಿರುತ್ತೇನೆ. ದಿ.21-04-2014 ರಂದು ಸುಮಾರು 12 ಗಂಟೆ ಸಮಯದಲ್ಲಿ ಬೆಳ್ಳೂರು ಕ್ರಾಸ್ ಬಳಿ ಬಸ್ ನಂ. ಕೆಎ-13-ಎಫ್ -1882 ಬಸ್ಸನ್ನು ಹತ್ತಿದ್ದು, ಸದರಿ ಬಸ್ಸು ತುಂಬಾ ರಸ್ ಆಗಿದ್ದು ನಾನು ಮತ್ತು ಇಬ್ಬರು ಮಕ್ಕಳು ಹಿಂಬದಿಯಲ್ಲಿ ಕುಳಿತ್ತಿದ್ದು, ನನ್ನ ಮಗ ?ಚಾಸಾ 14 ರವರು ಕಿಟಕಿ ಬಳಿ ಕುಳಿತ್ತಿದ್ದು, ಬಸ್ಸು ತುಂಬಾ ವೇಗವಾಗಿ ಚಲಿಸುತ್ತಿತ್ತು . ತಕ್ಷಣ ಬಸ್ಸು ಪಲ್ಟಿ ಹೊಡೆದಿದ್ದು ನನ್ನ ಮಗ ಕಿಟಕಿಯಿಂದ ಹೊರ ಬಿದ್ದಿರುತ್ತಾರೆ. ಸದರಿ ಅಪಘಾತದಿಂದ ನನ್ನ ಮಗನಿಗೆ ತುಂಬಾ ರಕ್ತಸ್ರಾವವಾಗಿತ್ತು ನನಗೂ ಕೂಡ ಬಲಬಾಗಕ್ಕೆ ಪೆಟ್ಟಾಗಿದ್ದು ಇಂದಿಗೂ ಕೂಡ ನೋವು ಇದೆ. ನನ್ನ ದೊಡ್ಡಮಗನಿಗೆ ಸಣ್ಣ ಪುಟ್ಟ ಗಾಯವಾಗಿತ್ತು. ಸೋಲೂರಿನ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ನಲ್ಲಿ ಹೋಗಿರುತ್ತೇವೆ. ಅಲ್ಲಿಂದ ನೆಲಮಂಗಲದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಬೆಂಗಳೂರಿನ ವಿಕ್ಟೋರಿಯ ಅಸ್ಪತ್ರೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಚಾಸಾ-14 ರವರಿಗೆ ತಲೆಯ ಮೂರು ಕಡೆ

ಏಟಾಗಿರುತ್ತದೆ. ಸದರಿ ವಿಚಾರವನ್ನು ದೂರು ಸಲ್ಲಿಸಲು ಹೋಗಿದ್ದಾಗ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಸ್ವತಹ ಇದವರೆವಿಗೂ ಯಾವುದೇ ಪರಿಹಾರ ನೀಡಿರುವುದಿಲ್ಲ ಎನ್ನುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಎಸ್?ಜಿ.ಆರ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ನನ್ನ ಹುಟ್ಟಿದ ದಿನಾಂಕ 20-08-1984 ಆಗಿದೆ. ನಾನು ಆರೋಪಿಯನ್ನು ನಿಖರವಾಗಿ ನೋಡಿರುವುದಿಲ್ಲ. ನಾನು ಬೆಳ್ಳೂರು ಕ್ರಾಸ್ ನಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದೆ. ನಾನು ಬೆಳ್ಳೂರು ಕ್ರಾಸ್ ನಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದ ಬಗ್ಗೆ ಬಸ್ ಟಿಕೇಟ್ ಇದೆ. ಸದರಿ ಟಿಕೇಟನ್ನು ಪೋಲೀಸರಿಗೆ ಹಾಜರುಪಡಿಸಿಲ್ಲ. ಸದರಿ ಬಸ್ಸಿನಲ್ಲಿ ಎಷ್ಟು ಜನ ಪ್ರಯಾಣಿಸುತ್ತಿದ್ದರು ಎಂದು ಹೇಳಲು ಸಾಧ್ಯವಿಲ್ಲ ಸಾಕ್ಷಿ ಮುಂದುವರೆದು ತುಂಬಾ ರಶ್ ಇತ್ತು ಎನ್ನುತ್ತಾರೆ. ನಾನು ಬಸ್ಸನ್ನು ಬೆಳ್ಳೂರು ಕ್ರಾಸ್ ನಲ್ಲಿ ಮಧ್ಯಾಹ್ನ 12 ರಿಂದ 12.30 ಗಂಟೆ ಸಮಯದಲ್ಲಿ ಹತ್ತಿರುತ್ತೇನೆ. ಸದರಿ ಅಪಘಾತವು ಸುಮಾರು 1 ರಿಂದ 1.30 ರ ಸಮಯದಲ್ಲಿ ಆಗಿರಬಹುದು ಸಾಕ್ಷಿ ಮುಂದುವರೆದು ನಿರ್ದಿಷ್ಟ ಸಮಯ ಗೊತ್ತಿಲ್ಲ ಎನ್ನುತ್ತಾರೆ. ಅಪಘಾತವು ಸೋಲೂರಿನ ಹೈ ವೇ ಯಲ್ಲಿ ಆಗಿದ್ದು, ನಿರ್ದಿಷ್ಟ ಸ್ಥಳ ಹೇಳಲು ಆಗುವುದಿಲ್ಲ. ಅಪಘಾತವು ಎದುರುಕಡೆಯಿಂದ ಯಾವುದೇ ವಾಹನ ಬಂದಿದೆ ಎಂದು ನಾವು ಬಸ್ಸು ಹತ್ತಿದ ಚಾಲಕ ಸೈಡಿಗೆ ಬಂದಿದ್ದರಿಂದ ಉಂಟಾಗಿದೆ ಎಂದು ತಿಳಿದುಬಂದಿರುತ್ತದೆ. ಕೆಎಸ್ ಆರ್ ಟಿ ಸಿ ಬಸ್ಸಗೆ ಸ್ಪಿಡ್ ಲಿಮಿಟ್ ನಿರ್ದಿಷ್ಟ ಪಡಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸೋಲೂರು ಗ್ರಾಮದಲ್ಲಿ ಜನನಿಬಿಡ ಪ್ರದೇಶವಾಗಿರುವುದರಿಂದ ಬಸ್ಸು ವೇಗವಾಗಿ ಹೋಗಲು ಸಾಧ್ಯವಿಲ್ಲದಿದ್ದರೂ ನಾನು ಸ ು ಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ದಿ. 05-07-2014 ರಂದು ಹೇಳಿಕೆ ನೀಡಿರುತ್ತೇನೆ. ನಾನು ಸೋಲೂರು ನೆಲಮಂಗಲ, ಮತ್ತು ಬೆಂಗಳೂರಿನ ವಿಕ್ಟೋರಿಯದಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ಚಿಕಿತ್ಸೆ ಪಡೆದುಕೊಂಡ ಸಂಬಂಧ ದಾಖಲೆಗಳನ್ನು ಪೋಲೀಸರಿಗೆ ನೀಡಿಲ್ಲ ಎಂದರೆ ಸಾಕ್ಷಿಯು ಅವರು ಕೇಳಿಲ್ಲ ನಾನು ಕೊಟ್ಟಿಲ್ಲ ಎನ್ನುತ್ತಾರೆ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**

# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 252 / 2018

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿಗಳು : ಗೋವಿಂದಯ್ಯ ಮತ್ತು ಇತರರು**

**ಚಾಸಾ :- 02 / ಪ್ರಾಸಾ :- 02**

| | |
|---|---|
| ಹೆಸರು | **ಲೋಕೇಶ್** |
| ತಂದೆಯ / ಗಂಡನ ಹೆಸರು | **ಬೆಟ್ಟಸ್ವಾಮಿ** |
| ವಯಸ್ಸು | **35** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಬೆಣಪ್ಪನಪಾಳ್ಯ,** |

**ದಿನಾಂಕ: 27-10-2021 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಮಹಜರ್ ಆಗಿದ್ದು, ಮಹಜರ್ ನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ನಾನು ಸುಮಾರು 4 ವರ್ಷಗಳ ಹಿಂದೆ ಗುಡೇಮಾರನಹಳ್ಳಿ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ

ಕಾಯುತ್ತಿರುವಾಗ ಪೋಲಿಸರು ನಿಪಿ-2 ಕ್ಕೆ ಸಹಿ ಮಾಡಿ ಎಂದು ಕೇಳಿದ ಬಾಬ್ತು ಸಹಿ ಮಾಡಿದ್ದು, ನಿಪಿ-2 ರಲ್ಲಿ ಏನು ಬರೆದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ, ಪೋಲಿಸರ ಕೋರಿಕೆಯ ಮೇರೆಗೆ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-2 ರ ಕಾಲಕ್ಕೆ ಮಹಜರ್ ಕ್ರಮ ಅನುಸರಿಸಿ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿರುವುದಿಲ್ಲ. ಇದನ್ನು ಹೊರತು ಪಡಿಸಿ ಪ್ರಕರಣದ ಬಗ್ಗೆ ಇನ್ನೇನು ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಕುದೂರು ಪೋಲಿಸರು ನಿಪಿ-1 ರ ಆಧಾರದ ಮೇಲೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು, ಸದರಿ ಸ್ಥಳವನ್ನು ನಾನು ತೋರಿಸಿದ್ದು, ಆರೋಪಿತರುಗಳು ಕೃತ್ಯಕ್ಕೆ ಬಳಸಿದ್ದಂತಹ ದೊಣ್ಣೆಯನ್ನು ನಾನು ಹಾಜರು ಪಡಿಸಿದ್ದು, ಪೋಲಿಸರು ನನ್ನ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ನಿಪಿ-2 ರಂತೆ ಮಹಜರ್ ಕ್ರಮ ಅನುಸರಿಸಿ, ಸದರಿ ದೊಣ್ಣೆಯನ್ನು ಅಮಾನತು ಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ತನಿಖಾಧಿಕಾರಿಗೆ ದಿನಾಂಕಃ 10-05-2015 ರಂದು ನಾನು ಈ ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆಂದು...... ಕೋರುತ್ತೇನೆಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-03 ಎಂದು ಗುರುತಿಸಲಾಯಿತು.

ಆರೋಪಿತರುಗಳೊಂದಿಗೆ ರಾಜೀ ಮಾಡಿಕೊಂಡ ಬಾಬ್ತು, ಆರೋಪಿತರುಗಳು ಆ ದಿವಸ ಅವಾಚ್ಯ ಶಬ್ದಗಳಿಂದ ನಿಂದಿಸಿ, ಪ್ರಾಣ ಬೆದರಿಕೆ ಹಾಕಿ ಹಾಗೂ ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ಹಲ್ಲೆ ಪಡಿಸಿ ಸಾಮಾನ್ಯ ಸ್ವರೂಪದ ಗಾಯ ಪಡಿಸಿದ್ದರೂ ಸಹ ಆರೋಪಿತರುಗಳಿಗೆ ಸಹಾಯ ಮಾಡಲು ಈ ದಿವಸ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು** ಃ- **ಶ್ರೀ. ಎಸ್.ಜಿ.ಆರ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**